


# ಲಕ್ಷ್ಮೀ ಬಾರಮ್ಮ

■ ಅಶೋಕ ಪರ್ವತಿ

ಹೆಂಗಸರಿಂದ ತಿಳಿದ ತಕ್ಷಣ ಅವಳು ಅದು ತಮ್ಮದೆಂತಲೂ, ಅದು ಮಗಳು ರಮ್ಯಾಳಿದ ಆದ ಪ್ರಮಾದವೆಂತಲೂ, ಮತ್ತು ಅದನ್ನು ಮರಳಿಸಲು ವಿನಂತಿಸಿಕೊಂಡಿದ್ದಾಳೆ. ವಾರಿಜಾ, ಶುಕ್ರವಾರ ಲಕ್ಷ್ಮೀ ಪ್ರತಿಮೆ ತನಗೆ ಸಿಕ್ಕಿದೆ ಅದನ್ನು ಪೂಜೆ ಕೂಡ ಮಾಡಿ ಆಗಿದೆ ಅದನ್ನು ಕೊಡಲಾಗುವದಿಲ್ಲವೆಂದಿದ್ದಾಳೆ. ಪ್ರತಿಮೆ ತಮ್ಮದೆಂದು ಗೊತ್ತಾದರೂ ಕೊಡುವದಿಲ್ಲ ಎನ್ನುವದು ಯಾವ ನ್ಯಾಯ ಎಂದು ಪ್ರಭಾಳ ವಾದ. ಕೊಡು ಎಂದು ಪ್ರಭಾ, ಕೊಡಲಾಗುವದಿಲ್ಲ ಎನ್ನುವ ವಾರಿಜಾ. ಇಬ್ಬರೂ ಸೋಲಲು ತಯಾರಿಲ್ಲ. ನೆರೆಯ ಕೆಲ ಹೆಂಗಸರು ಪ್ರಭಾಳ ಪರವಾಗಿದ್ದರೆ, ಇನ್ನು ಕೆಲವರು ವಾರಿಜಾಳ ಪರ. ಅವತ್ತೇ ದೊಡ್ಡ ಜಗಳವಾಗಿ ಇಬ್ಬರ ನಡುವೆ ಕಂದಕ ಹುಟ್ಟಿ, ಮಾತು ನಿಂತು ಹೋಯಿತು. ಪ್ರತಿಮೆ ಮಾತ್ರ ವಾರಿಜಾಳಲ್ಲೇ ಉಳಿಯಿತು. ಪ್ರತಿಮೆ ಹೋದದ್ದಕ್ಕಿಂತ ಪ್ರತಿಮೆ ತಮ್ಮದೆಂದು ಗೊತ್ತಾದರೂ, ಕೊಡದ ವಾರಿಜಾಳ ವರ್ತನೆ ಪ್ರಭಾಳಿಗೆ ಅವಮಾನ, ಬೇಸರ, ಜಿಗುಪ್ಸೆ ಹುಟ್ಟಿಸಿದೆ. ಮೊದಲಿನ ನೆರೆಹೊರೆಯವರೊಂದಿನ ಒಡನಾಟ,ಮಾತುಕತೆ ನಿಂತು ಹೋಗಿದೆ. ಮುಂದೆ ಕೆಲ ದಿನಗಳಲ್ಲೇ ನನಗೆ ವರ್ಗವಾದುದರಿಂದ ಆ ಮನೆಯನ್ನು ಬಿಟ್ಟದ್ದಾಯ್ತು.

ಮುಂದೆ ಜೀವನ ನಿಂತ ನೀರಾಗದೇ ಕೆಲವು ಸಲ ಮಂದಗತಿಯಿಂದ ಕೆಲವು ಸಲ ರಭಸದಿಂದ ಹರಿಯುತ್ತಿತ್ತು. ಸುಮಾರು ಇಪ್ಪತ್ತೈದು ವರುಷಗಳಾದವು. ಸುರೇಶ ಕಲಿಯಲು ಅಮೇರಿಕಗೆ ಹೋದವನು ಅಲ್ಲಿಯೇ ನೌಕರಿ ಹಿಡಿದ. ರಮ್ಯಳ ಲಗ್ನವಾಗಿ ಅವಳು ಬೇರೊಂದು ಊರಿನಲ್ಲಿ ಮನೆ ಮಾಡಿದಳು. ನಾನು ಬೆಂಗಳೂರಿನ ಬಡಾವಣೆಯೊಂದರಲ್ಲಿ ಮನೆ ಕಟ್ಟಿ ನೌಕರಿಯಿಂದ ಸ್ವಯಂ ನಿವೃತ್ತಿ ಪಡೆದು ನಿವೃತ್ತ ಜೀವನ ನಡೆಸತೊಡಗಿದೆ. ಒಂದು ದಿನ ನಾನು ತಿಂಡಿ ತಿಂದು ಓದಿದ ಪೇಪರ ಮೇಲೆ ಮತ್ತೆ ಕಣ್ಣಾಡಿಸುತ್ತಿದ್ದಾಗ ಸುರೇಶನಿಂದ ಫೋನ ಬಂತು. ಪ್ರಭಾ ತರಕಾರಿ ತರಲು ಹೊರಗಡೆ ಹೋಗಿದ್ದಳು. ಉಭಯಕುಶಲೋಪರಿಯಾದ ಮೇಲೆ ಸುರೇಶ 'ಅಪ್ಪಾ ನಾನೊಂದು ಹುಡುಗಿಯನ್ನು ಇಷ್ಟಪಟ್ಟಿದ್ದೇನೆ ಮತ್ತು ಅವಳನ್ನೇ ಮದುವೆಯಾಗಬೇಕೆಂದು ಮಾಡಿದ್ದೇನೆ' ಎಂದ. ಇದನ್ನು ನಾನು ಮೊದಲೇ ಊಹಿಸಿದ್ದೆ. ಯಾಕೆಂದರೆ ನಾವು ಸುರೇಶನಿಗೆ ಮದುವೆಯಾಗು, ನಾವು ಒಳ್ಳೆಯ ಹೆಣ್ಣು ನೋಡುತ್ತೇವೆ ಎಂದಾಗಲೆಲ್ಲ ಒಂದಲ್ಲ ಒಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದ. ಪ್ರಭಾಳನ್ನು ಸಹ ಇಂತಹ ಒಂದು ಸಂದರ್ಭಕ್ಕೆ ತಯಾರಾಗಿಸಿದ್ದೆ.

'ಯಾರು ಆ ಹುಡುಗಿ' ಎಂದು ಶುಷ್ಕ ಧ್ವನಿಯಲ್ಲಿ ಕೇಳಿದೆ. ನನ್ನ ಪ್ರತಿಭಟನೆಯನ್ನು ನಿರೀಕ್ಷಿಸಿದ್ದ ಸುರೇಶ ಅದು ಬಾರದಿದ್ದಾಗ, ಉತ್ತೇಜಿತನಾಗಿ 'ಅಪ್ಪಾ, ಅವಳ ಹೆಸರು ನಯನಾ ಅಂತ, ಬೆಂಗಳೂರಿನವಳೇ, ಕನ್ನಡದವಳೇ, ನಾನು ಕೆಲಸ ಮಾಡುವ ಕಂಪನಿಯಲ್ಲೇ ಕೆಲಸ ಮಾಡುತ್ತಾಳೆ, ಅವಳ ತಂದೆ **KEB** ಯಲ್ಲಿ ಎಕ್ಸಿಕ್ಯುಟಿವ್ ಎಂಜಿನಿಯರ್ ಆಗಿದ್ದರಂತೆ. ರಿಟೈರ್ ಆಗುವುದಕ್ಕಿಂತ ಮೊದಲೇ ತೀರಿ ಹೋದರಂತೆ , ಒಬ್ಬಳೇ ಮಗಳು, ಅವರ ತಾಯಿ ವಾರಿಜಾ ಅಂತೆ, ನಾವು ಹಿಂದೆ ಇದ್ದೆವಂತಲ್ಲಾ ಬಸವೇಶ್ವರ ನಗರದಲ್ಲಿ ಸ್ವಂತ ಮನೆಯಲ್ಲಿ ಒಬ್ಬರೇ ಇದ್ದಾರಂತೆ." ಎಂದು ಮುಂತಾಗಿ ಹೇಳಿದ. ಅಲ್ಲದೇ ಹುಡುಗೆ ಅನ್ಯ ಜಾತಿಯವಳಾದರೂ ನಮ್ಮ ಮನೆಗೆ ಹೊಂದಿಕೊಂಡು ಹೋಗುತ್ತಾಳೆಂದೂ,ತನ್ನ ತಾಯಿಯ ಸಮ್ಮತಿಯನ್ನು ಇದಕ್ಕೆ ಪಡೆವ, ಜವಾಬ್ದಾರಿಯನ್ನು ನನ್ನ ಮೇಲೇ ಹೊರಿಸಿದ. ಅವನು ಮಾತನಾಡಿದ ಮೇಲೆ ನನ್ನ ಆತಂಕ ಹೆಚ್ಚಾಯಿತು. ಸುರೇಶ ಮೆಚ್ಚಿದ ಹುಡುಗೆ ನಮ್ಮ ಹಳೆಯ ಮನೆಯ ಪಕ್ಕದ ಮನೆಯ ವಾರಿಜಾಳ ಮಗಳೇ ಎಂಬುದುರಲ್ಲಿ ಯಾವದೇ ಸಂಶಯ ನನಗಿರಲಿಲ್ಲ. ಈ ಸಂಬಂದಕ್ಕೆ ಪ್ರಭಾ ಒಪ್ಪುವದು ಸಾಧ್ಯವಿಲ್ಲವೆಂದು ನನಗೆ ಅನಿಸತೊಡಗಿತು. ಹಳೆಯ ಆ ಕಹಿ ಘಟನೆಯನ್ನು ಪ್ರಭಾ ಮರೆತಿಲ್ಲವೆಂದು ಅವಳು ಬಾಯಿಬಿಟ್ಟು ಆಡದಿದ್ದರೂ ಅವಳನ್ನು ಅರಿತ ನನಗೆ ಗೊತ್ತಿತ್ತು.

ನಾನು ಈಗ ಉಭಯ ಸಂಕಟದಲ್ಲಿ ಬಿದ್ದಿದ್ದೆ. ಬಸವೇಶ್ವರನಗರಕ್ಕೆ ಹೋಗಿ ಸುರೇಶ ಹೇಳಿದ ಹುಡುಗೆಯ ಸ್ವಭಾವದ ಬಗ್ಗೆ ಹಾಗೂ ಅವಳು ಅದೇ ವಾರಿಜಾಳ ಮಗಳೆಂದು ವಿವಿಧ ಮೂಲಗಳಿಂದ ಖಚಿತ ಮಾಡಿಕೊಂಡೆ. ಹಾಗೆ ಮಾಡುವಾಗ ಅವಳ ತಾಯಿಯ ಅಂತಸ್ತಿನ ಬಗ್ಗೆಯೂ ತಿಳಿಯಿತು. ವಾರಿಜಾಳಿಗೆ ಅವಳ ಗಂಡ ಬೆಂಗಳೂರಿನಲ್ಲಿ ಸ್ವಂತ ಮನೆಯಲ್ಲದೇ ಎರಡು ಮೂರು ಸೈಟ್, ಅಪಾರ ಪ್ರಮಾಣದ ಬ್ಯಾಂಕ್ ಬ್ಯಾಲೆನ್ಸ್ ಬಿಟ್ಟು ಹೋಗಿರುವದು ತಿಳಿಯಿತು. ಸುರೇಶನಿಗೆ ಫೋನ್ ಮಾಡಿ ಹಳೆಯ ಕಹಿ ಘಟನೆಯನ್ನು ವಿವರಿಸಿ, ಅವನ ಅಮ್ಮನನ್ನು ಈ ಸಂಬಂಧಕ್ಕೆ ಒಪ್ಪಿಸುವುದು ಕಷ್ಟದ ಕೆಲಸವೆಂದು ತಿಳಿಸಿದೆ. ಸುರೇಶ ಅದಾವುದಕ್ಕೂ ಕಿವಿಗೊಡದೆ, ತನ್ನ ನಿರ್ಧಾರದಿಂದ ದೂರ ಸರಿಯುವದು ಸಾಧ್ಯವಿಲ್ಲವೆಂದು ತಿಳಿಸಿದ.

ನಾನು ಬೇರೆ ದಾರಿ ಕಾಣದೇ ಪ್ರಭಾಳಿಗೆ ನಡೆದದ್ದನ್ನೆಲ್ಲ ತಿಳಿಸಿದೆ. ಪ್ರಭಾ ಎಲ್ಲವನ್ನು ಕೇಳಿ ಮ್ಲಾನವದನಳಾದಳು. ಏನನ್ನು ಮಾತನಾಡಲಿಲ್ಲ. ಆಗ ರಾತ್ರಿ ಹತ್ತು ಗಂಟೆಯಾದದ್ದರಿಂದ ಏನನ್ನು ಮಾತನಾಡದೇ ಸುಮ್ಮನೇ ಹೋಗಿ ರಗ್ಗನ್ನೆಳೆದು ಮಲಗಿಕೊಂಡುಬಿಟ್ಟಳು. ನಾನೂ ಮುಂದೆ ನಡೆಯಬಹುದಾದ ಅನಾಹುತಗಳನ್ನು ನೆನೆಯುತ್ತ ಹಾಸಿಗೆಯಲ್ಲಿ ಇಡೀ ರಾತ್ರಿ ಹೊರಳಾಡಿದೆ.

ಬೆಳಗಿನ ಜಾವ ನನಗೆ ಸ್ವಲ್ಪ ನಿದ್ರೆ ಹಿಡಿದಿತ್ತು. ಪ್ರಭಾಳ ಧ್ವನಿ ಕೇಳಿ ಮುಖ ಮಾರ್ಜನ ಮುಗಿಸಿ ಚಹಾ ಕುಡಿಯಲು ಕುಳಿತೆ. ಪ್ರಭಾಳ ಮುಖ ಗಮನಿಸಿದೆ. ಶಾಂತವಾಗಿತ್ತು. ಧೈರ್ಯಗೊಂಡು ಏನು ನಿನ್ನ ನಿರ್ಧಾರ ಎಂದು ಕೇಳಿದೆ. 'ಆ ವಾರಿಜಾಗ ಸರಿ ಆತು ಬಿಡ್ರೀ, ಕಂಡವರ ಲಕ್ಷ್ಮೀ ತಗೊಂಡರ ಹೀಂಗs ಅಗೂದು. ನಮ್ಮ ಲಕ್ಷ್ಮೀ ನಮಗ ಬರ್ತಾಳ ಬಿಡ್ರೀ' ಎಂದಳು. ನಾನು ನಿಟ್ಟುಸಿರು ಬಿಟ್ಟೆ. ■